

ಜನವರಿ ತಿಂಗಳಲ್ಲಿ ಚಾಂಗು ಲೇಕ್



ಬಾಬಾ ಹರ್‌ಭಜನ್ ವಿಗ್ರಹ




ಬಾಬಾ ಕಾ ಎಟಿಎಂ

## ‘ಓಲ್ಡ್ ಬಾಬಾ ಮಂದಿರ್’

ಬಾಬಾ ಹರ್‌ಭಜನ್ ಸಿಂಗ್ ಮಂದಿರವು ನಾಥುಲ ಪಾಸ್ ಅಂದರೆ ಚೀನಾ ಗಡಿಗೆ ಹತ್ತಿರವಿರುವ ಸ್ಥಳದಲ್ಲಿದೆ. ಈ ಮಂದಿರವನ್ನು ಒಬ್ಬ ಭಾರತೀಯ ಯೋಧನ ನೆನಪಿಗಾಗಿ ಆತನ ಇಚ್ಛೆಯಂತೆ ಕಟ್ಟಲಾಗಿದೆ. ಈತ ಒಬ್ಬ ಪವಾಡ ಪುರುಷ ಎಂದೂ ಸ್ಥಳೀಯರು ನಂಬುತ್ತಾರೆ.

ಪಂಜಾಬ್‌ನ ಸದ್ರಾಣ ಗ್ರಾಮದ ಸಿಖ್ ಕುಟುಂಬದಲ್ಲಿ ಜನಿಸಿದ ಹರಭಜನ್, 1966ರಲ್ಲಿ ಪಂಜಾಬ್ ರೆಜಿಮೆಂಟ್‌ನಲ್ಲಿ ಸೈನಿಕನಾಗಿ ಸೇರಿದರು. ಚೀನಾ ಗಡಿ ಭಾಗದಲ್ಲಿ ಕುದುರೆಗಳ ಮೇಲೆ ಆಹಾರ ಸಾಮಗ್ರಿಗಳನ್ನು ಹೇರಿಕೊಂಡು ತಮ್ಮ ಔಟ್‌ಪೋಸ್ಟ್‌ಗೆ ಸಾಗುತ್ತಿರುವಾಗ ಕಾಲು ಜಾರಿ ಕಣಿವೆಗೆ ಬಿದ್ದು ಸಾವಿಗೀಡಾದರು. ಘಟನೆ ನಡೆದ ಕೇವಲ ಮೂರು ದಿನಗಳ ಬಳಿಕ ಒಬ್ಬ ಸೈನಿಕನ ಕನಸಿನಲ್ಲಿ ಬಂದು ತನ್ನ ಮೃತದೇಹ ಇಂತಹ ಜಾಗದಲ್ಲಿ ಇದೆ ಎಂದು ತಿಳಿಸಿದರಂತೆ. ಹೋಗಿ ನೋಡಿದರೆ ಮೃತ ಶರೀರ ಅಲ್ಲೇ ಇದೆ! ಅನೇಕ ಸಲ ಸೈನಿಕರ ಕನಸಿನಲ್ಲಿ ಬಂದು ತನ್ನ ಸಮಾಧಿ ಇರುವಲ್ಲಿ ದೇಗುಲ ಕಟ್ಟಬೇಕೆಂದು ತಿಳಿಸಿದರಂತೆ. 1982ನೇ ಇಸವಿಯಲ್ಲಿ ಅವರ ಅಪೇಕ್ಷೆಯಂತೆ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಆ ಬಳಿಕ